# ನೈತಿಕ ವಿವಿಕ್ತತೆ

**ಅರುಣ್ ಜೇಟ್ಲಿ**
**ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ**

ಗುಜರಾತ್‌ನಲ್ಲಿ ಸಂಭವಿಸಿದೆ ಎನ್ನಲಾದ "ಸ್ನೂಪ್‌ಗೇಟ್" ಹಗರಣ ಅಂದರೆ ವೈಯಕ್ತಿಕ ಜೀವನದಲ್ಲಿ ಪೊಲೀಸ್ ಹಸ್ತಕ್ಷೇಪ ಹಗರಣದ ತನಿಖೆ ನಡೆಸಲು ಕೇಂದ್ರ ಸರ್ಕಾರ ತನಿಖಾ ಆಯೋಗವನ್ನು ಎರಡು ತಿಂಗಳುಗಳ ಹಿಂದೆ ನೇಮಿಸಿತ್ತು. ಈ ವಿಚಾರದಲ್ಲಿ ಈಗಾಗಲೇ ಗುಜರಾತ್ ಸರ್ಕಾರ ತನಿಖಾ ಆಯೋಗವನ್ನು ನೇಮಿಸಿದ್ದು, ತನಿಖೆ ನಡೆಸುತ್ತಿದೆ. ಕೇಂದ್ರ ಸರ್ಕಾರ ರಾಜಕೀಯ ಉದ್ದೇಶಗಳನ್ನು ಹೊಂದಿದೆ. ಗುಜರಾತ್ ಸರ್ಕಾರ ಹಾಗೂ ಭಾಜಪ ಪ್ರಧಾನ ಮಂತ್ರಿ ಅಭ್ಯರ್ಥಿ ಶ್ರೀ ನರೇಂದ್ರ ಮೋದಿ ಅವರಿಗೆ ಮುಜುಗರ ಉಂಟುಮಾಡುವ ಉದ್ದೇಶ ಅವರದ್ದಾಗಿದೆ. ಅಧಿಕಾರ ದುರುಪಯೋಗದ ಜೊತೆಗೆ ಕೇಂದ್ರ ಸರ್ಕಾರ ನೇಮಿಸಿದ ಆಯೋಗ ಸೇಡು ಹಾಗೂ ದುರಹಂಕಾರದಿಂದ ವರ್ತಿಸಿದೆ. ಕಳೆದ 10 ವರ್ಷಗಳ ಅಧಿಕಾರಾವಧಿಯಲ್ಲಿ ಅಹಂಕಾರವೇ ಯುಪಿಎ ಸರ್ಕಾರದ ಗುಣಲಕ್ಷಣವಾಗಿತ್ತು. ದುರಹಂಕಾರ ರಾಜಕೀಯ ಪತನಕ್ಕೆ ಕಾರಣವಾಗುತ್ತದೆ. ದುರಹಂಕಾರಿಗಳಿಗೆ ವಿನಯತೆ ಗೊತ್ತಿರುವುದಿಲ್ಲ. ಅವರ ದುರಹಂಕಾರದ ವರ್ತನೆಗಳನ್ನು ಸಹಿಸದ ಸಮಾಜದ ವಿವಿಧ ವರ್ಗಗಳು ದೂರಸರಿಯುತ್ತವೆ.

ಆ ಆಯೋಗ ಏನಾಗಿದೆ? ಆಯೋಗದ ನೇತೃತ್ವ ವಹಿಸಲು ಒಬ್ಬರ ನಂತರ ಮತ್ತೊಬ್ಬರು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ಕೋರಲಾಯಿತು. ರಾಜಕೀಯ ಪ್ರೇರಿತ ತನಿಖೆ ನಡೆಸಲು ಅವರೆಲ್ಲ ನಿರಾಕರಿಸಿದ್ದಾರೆ. ನಂತರ, ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರನ್ನು ಹುದ್ದೆ ಸ್ವೀಕರಿಸುವಂತೆಯೂ ಕೋರಲಾಯಿತು. ಇಂತಹ ಕಾರ್ಯಗಳಿಗೆ ತಾವು ಲಭ್ಯವಿಲ್ಲವೆಂದು ಅವರೂ ಸಹ ಸ್ಪಷ್ಟಪಡಿಸಿದ್ದಾರೆ. ಅಧಿಕಾರ ಬಳಕೆಯ ವರ್ಣರಂಜಿತ ಕಾರ್ಯಗಳಿಗೆ ಯಾರಿಂದಲೂ ಸಹಕಾರ ದೊರೆಯದೆ, ಸರ್ಕಾರ ನೈತಿಕ ವಿವಿಕ್ತತೆ ಎದುರಿಸುತ್ತಿದೆ.

ಅದೇ ರೀತಿ, ಲೋಕಪಾಲ್ ಸಂಸ್ಥೆಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿ ರೂಪಿಸುವ ಪ್ರಕ್ರಿಯೆ ಆರಂಭವಾದಾಗ, ಪ್ರಧಾನಮಂತ್ರಿಗಳು ಮತ್ತು ಅವರ ಅಭಿಪ್ರಾಯವನ್ನೇ ಹೊಂದಿದ ಅನ್ಯರು ಆಯ್ಕೆ ಸಮಿತಿಗೆ ನ್ಯಾಯಿಕ ಸದಸ್ಯರನ್ನು ನೇಮಿಸಲು ಖ್ಯಾತನಾಮರಾದ ನ್ಯಾಯಮೂರ್ತಿ ವೆಂಕಟಾಚಲಯ್ಯ, ಫಾಲಿ ಎಸ್. ನಾರಿಮನ್, ಸೋಲಿ ಜೆ ಸೊರಬ್‌ಜಿ, ಕೆ ಪರಸರನ್, ಕೆ.ಕೆ.ವೇಣುಗೋಪಾಲ್ ಹಾಗೂ ಹರೀಷ್ ಸಾಳ್ವೆ ಅವರ ಹೆಸರುಗಳನ್ನು ನಿರಾಕರಿಸಿದ್ದರು. ಶೋಧನಾ ಸಮಿತಿ ನೇಮಿಸಿದ ನಂತರ ಮೂರು ಸರ್ಕಾರಿ ವಕೀಲರಲ್ಲಿ ಒಬ್ಬರನ್ನು ಅಥವಾ ಹೆಚ್ಚಿನವರನ್ನು ನೇಮಿಸುವ ಇಚ್ಛೆಯನ್ನು ಸರ್ಕಾರ ಹೊಂದಿತ್ತು. ಶ್ರೀಮತಿ ಸುಷ್ಮಾ ಸ್ವರಾಜ್ ಇದಕ್ಕೆ ತಮ್ಮ ಒಪ್ಪಿಗೆ ನೀಡಲಿಲ್ಲ.

ಲೋಕಪಾಲ್ ಹಾಗೂ ಲೋಕಾಯುಕ್ತ ಕಾಯಿದೆ ಅಡಿ ರೂಪಿಸಲಾದ ನಿಯಮಗಳು ಕಾಯಿದೆಗೆ ವಿರುದ್ಧವಾಗಿವೆ ಎಂದು ನಾನು ದಿನಾಂಕ 20 ಜನವರಿ 2014 ಹಾಗೂ 30 ಜನವರಿ 2014ರಂದು ಪ್ರಧಾನಮಂತಿಗೆ ಬರೆದ ಎರಡು ಪತ್ರಗಳಲ್ಲಿ ತಿಳಿಸಿದ್ದೆ. ಆಯ್ಕೆ ಸಮಿತಿ ಹಾಗೂ ಶೋಧನಾ ಸಮಿತಿಗಳ ಅಧಿಕಾರಗಳನ್ನು ಮೊಟಕುಗೊಳಿಸಲಾಗಿದೆ. ವಿಶೇಷವಾಗಿ ಶೋಧನ

ಸಮಿತಿ ಕೇವಲ ಗುಮಾಸ್ತನ ಪಾತ್ರ ವಹಿಸುವ ಮಟ್ಟಕ್ಕೆ ಇಳಿಸಲಾಗಿದೆ. ನನ್ನ ಆಕ್ಷೇಪಗಳನ್ನು ಪರಿಗಣಿಸದೆ ತಿರಸ್ಕರಿಸಲಾಗಿದೆ. ಶೋಧನಾ ಸಮಿತಿ ಮತ್ತು ಆಯ್ಕೆ ಸಮಿತಿ ಅಧಿಕಾರಗಳನ್ನು ಸಿಬ್ಬಂದಿ ಖಾತೆ ದೋಚಿದೆ ಎಂದು ನಾನು ವಾದಿಸಿದ್ದೆ. ಆಯ್ಕೆಯ ಮಾನದಂಡ ನಿರ್ಧರಿಸಲು ಆಯ್ಕೆ ಸಮಿತಿ ಸಭೆಯನ್ನೇ ಕರೆಯಲಾಗಲಿಲ್ಲ. ಲೋಕಪಾಲ್ ಆಧ್ಯಕ್ಷರಾಗಲು ಪ್ರತಿಭಾವಂತರನ್ನು ಅಹ್ವಾನಿಸಬೇಕು. ಅರ್ಜಿಕರೆಯುವ ಪ್ರಕ್ರಿಯೆ ಅವರ ಘನತೆಗೆ ಒಪ್ಪುವಂತಹದಲ್ಲ ಮತ್ತು ಇದರಿಂದ ಪ್ರಭಾವಿಗಳ ಹಸ್ತಕ್ಷೇಪ ಹೆಚ್ಚುತ್ತದೆ.

ಇದೇ ಕಾರಣ ನೀಡಿರುವ ಶ್ರೀ ಫಾಲಿ ಎಸ್.ನಾರಿಮನ್ ಹಾಗೂ ನ್ಯಾಯಮೂರ್ತಿ ಕೆ.ಟಿ.ಥಾಮಸ್ ಶೋಧನಾ ಸಮಿತಿ ಸದಸ್ಯತ್ವವನ್ನು ನಿರಾಕರಿಸಿದ್ದಾರೆ. ಹುದ್ದೆಗೆ ಅತಿ ಯೋಗ್ಯರಾದವರನ್ನು ನೇಮಿಸಲು ಈಗಿರುವ ಪ್ರಕ್ರಿಯೆ ಸೂಕ್ತವಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅಸ್ತಿತ್ವಕ್ಕೆ ಬರುವ ಮುನ್ನವೇ ಲೋಕಪಾಲ್ ಸಂಸ್ಥೆಯನ್ನು ಹಾಳು ಮಾಡುವ ಪ್ರಯತ್ನ ಇದಾಗಿದೆ ಎಂದು ಸ್ಪಷ್ಟವಾಗುತ್ತದೆ. ಶೋಧನಾ ಮತ್ತು ಆಯ್ಕೆ ಸಮಿತಿ ಪ್ರಕ್ರಿಯೆಯಲ್ಲಿ ಸರ್ಕಾರದ ಉದ್ದೇಶಗಳನ್ನು ಶಂಕಿಸುತ್ತಿರುವ ಖ್ಯಾತನಾಮರು ಮತ್ತು ಪಕ್ಷಾತೀತವಾಗಿ ಉಳಿದವರನ್ನು ನೋಡಿದಾಗ ಸರ್ಕಾರದ ವಿವಿಕ್ತತೆ ಸಂಪೂರ್ಣವಾಗಿದೆ ಎಂದು ಖಚಿತಪಡುತ್ತದೆ.

..............................